# ಶ್ರೀಮಾತೆ ಮಾಡುತ್ತಿದ್ದ ಪೂಜೆಯ ವೈಶಿಷ್ಟ್ಯ ಹಾಗೂ ತಾತ್ಪರ್ಯ

ಬಂಗಾಳಿ ಮೂಲ: **ಸ್ವಾಮಿ ಪ್ರಮೇಯಾನಂದ**

ಅನುವಾದ : **ಸ್ವಾಮಿ ಆತ್ಮಜ್ಞಾನಂದ**

## ಭಾಗ ೨



**ಪೂ**ಜೆಯ ಸಮಯದಲ್ಲಿ ಪೂಜಾರಿಯ ಮಾನಸಿಕ ಪವಿತ್ರತೆ ಎಷ್ಟು ಮುಖ್ಯ ಎಂದು ವಿಶೇಷವಾಗಿ ಹೇಳಬೇಕಿಲ್ಲ. ಮಾನಸಿಕ ಪವಿತ್ರತೆಯಿಲ್ಲದಿದ್ದಲ್ಲಿ ಪೂಜ್ಯ ದೇವತೆಯ ಧ್ಯಾನವನ್ನು ಮಾಡುವಾಗ ಚಿತ್ತವನ್ನು ಕೇಂದ್ರೀಕರಿಸುವುದು ಪೂಜಾರಿಗೆ ಅಸಾಧ್ಯವಾಗುತ್ತದೆ. ಆದ್ದರಿಂದ ಪೂಜೆಯಲ್ಲಿ ಚಿತ್ತಶುದ್ಧಿ ಅಥವಾ ಅಂತಃಶುಚಿ ಅತ್ಯಾವಶ್ಯಕ. ಸ್ನಾನಾದಿಗಳ ಮೂಲಕ ದೇಹವನ್ನು ಶುದ್ಧಿ ಮಾಡಿಕೊಳ್ಳಬೇಕೆಂದು ಶಾಸ್ತ್ರಕಾರರು ನಿರ್ದೇಶಿಸಿದ್ದಾರೆ. ಆಶ್ರಯವು ಶುಚಿಯಾಗಿಲ್ಲದಿದ್ದರೆ ಆಶ್ರಿತವೂ ಅಲ್ಲಿ ಪೂರ್ಣರೂಪದಲ್ಲಿ ವಿದ್ಯಮಾನವಾಗಿರುವುದಿಲ್ಲ. ಪೂಜ್ಯ ದೇವತೆಯು ಪೂಜಾರಿಗೆ ಪರಮ ಶ್ರದ್ಧಾರ್ಹ, ಪರಮ ಪ್ರೇಮಕ್ಕೆ ಪಾತ್ರ ಹಾಗೂ ಆತ್ಮಸ್ವರೂಪವೇ ಆಗಿದೆ. ನಮ್ಮನ್ನು ನಾವು ಪ್ರೀತಿಸುವಷ್ಟು ಮತ್ತೋರ್ವರನ್ನು ಎಂದೂ ಪ್ರೀತಿಸುವುದಿಲ್ಲ. ಆದ್ದರಿಂದಲೇ ಶ್ರೇಷ್ಠ ವಸ್ತುಗಳನ್ನು ಉಪಯೋಗಿಸಿ ನಮ್ಮನ್ನು ನಾವು ಸಂತುಷ್ಟಗೊಳಿಸಿಕೊಳ್ಳಲು ಯತ್ನಿಸುತ್ತೇವೆ. ಯಾವಾಗ ನಾವು ಪೂಜಿಸುವ ದೇವರು ನಮಗೆ ಅತ್ಯಂತ ಪ್ರೀತಿಪಾತ್ರನೋ, ನಮ್ಮ ಅಂತರಂಗದ ಶ್ರದ್ಧೆಗೆ ಪಾತ್ರನೋ ಆಗ ಉಲ್ಲಾಸದಿಂದ ಅತ್ಯುತ್ಕೃಷ್ಟ ವಸ್ತುಗಳನ್ನೇ ಅವನಿಗೆ ಅರ್ಪಿಸಬೇಕೆಂದು ಹಂಬಲಿಸುತ್ತೇವೆ. ನಮ್ಮ ಸಾಮರ್ಥ್ಯ ಸೀಮಿತವಾಗಿದ್ದರೂ ಯಾವ ವಸ್ತುವನ್ನು ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಅರ್ಪಿಸುವೆವೋ, ಅದು ಎಷ್ಟೇ ಅಲ್ಪವಾಗಿರಲಿ ಅಥವಾ ತುಚ್ಛವಾಗಿರಲಿ, ಅದನ್ನು ಶ್ರದ್ಧೆಯಿಂದ ಹಾಗೂ ಶುದ್ಧವಾದ ಮನೋಭಾವದಿಂದ, ಯಾವುದೇ ದೋಷವಿಲ್ಲದಂತೆ, ಪರಮೇಶ್ವರನಿಗೆ ಅರ್ಪಿಸಬಹುದಲ್ಲ! ಆಗ ಅದು ಬೆಲೆಯಿಲ್ಲದ ವಸ್ತುವಾಗಿದ್ದರೂ ಅತ್ಯಮೂಲ್ಯವಾಗುತ್ತದೆ, ಪವಿತ್ರವಾಗುತ್ತದೆ. ಈ ವಿಚಾರವಾಗಿ ಶ್ರೀಮಾತೆ ಹೇಳಿರುವುದು ಗಮನಾರ್ಹ. ''ಗಂಧ-ಚಂದನಗಳಲ್ಲಿ ಸಿಬಿರು ಇರಬಾರದು, ಹೂವು ಬಿಲ್ವಪತ್ರೆಗಳಲ್ಲಿ ಹುಳುವಾಗಲಿ ಮುಳ್ಳಾಗಲಿ ಇರಬಾರದು.'' ಹೊರಗಿನ ಪ್ರಪಂಚದ ವೈಷಮಿಕ ದೃಷ್ಟಿಯಿಂದ ಹೂವು ಹಾಗೂ ಬಿಲ್ವಪತ್ರೆಗಳು ನಗಣ್ಯ ಹಾಗೂ ಮೂಲ್ಯವಿಲ್ಲದವು. ಆದರೆ ಪೂಜಾರಿಯ ಶ್ರದ್ಧೆ, ಪ್ರೇಮಗಳಿಂದ ಅವು ಉಜ್ವಲವಾಗುತ್ತವೆ, ನೈವೇದ್ಯವಾಗಿ ಶೋಭಿಸುತ್ತವೆ. ಅತ್ಯಂತ ಸಾಮಾನ್ಯವಾದ ವಸ್ತುವೂ ಶ್ರೀಮಾತೆಯವರ ಪೂಜೆಯ ಗುಣದಿಂದ ನಿರ್ದೋಷವಾಗಿ ದೇವತೆಯ ಪಾದಗಳಿಗೆ ಅರ್ಪಿತವಾಗಿ ಕೃತಾರ್ಥವಾಗುತ್ತಿತ್ತು.

ಎಲ್ಲಕ್ಕಿಂತ ಮಿಗಿಲಾಗಿ ಶ್ರೀಮಾತೆ ಮಾಡುತ್ತಿದ್ದ ಪೂಜೆಯಲ್ಲಿ ಎದ್ದು ಕಾಣುತ್ತಿದ್ದುದು ಅವರ ಅನುರಾಗ ಹಾಗೂ ವ್ಯಾಕುಲತೆ. ಮುಂದಿರುವ ಪ್ರತಿಕೃತಿಯಲ್ಲಿ ಶ್ರೀರಾಮಕೃಷ್ಣರನ್ನು ಸಾಕ್ಷಾತ್ತಾಗಿ ಕಂಡು ಅವರೊಂದಿಗೆ ಪ್ರೀತಿಯಿಂದ ವ್ಯವಹರಿಸುತ್ತಿದ್ದುದೇ ಇದಕ್ಕೆ ಕಾರಣ. ಈ ಕೆಳಗೆ ಹೇಳಿರುವ ಘಟನೆಯೇ ಇದನ್ನು ದೃಢೀಕರಿಸುತ್ತದೆ. ಸ್ವಾಮಿ ಗಂಭೀರಾನಂದರು ಹೇಳಿರುವಂತೆ: ''ಪೂಜೆಯ ವೇಳೆಯಲ್ಲಿ ಶ್ರೀಮಾತೆ ಹೂವುಗಳನ್ನು ಠಾಕೂರರ ಮುಂದೆ ಕೈಯಲ್ಲಿ ಹಿಡಿದು ನಿಧಾನವಾಗಿ ಅವುಗಳನ್ನು ಅವರಿಗೆ ಅರ್ಪಿಸುವ ರೀತಿಯಲ್ಲಿ ಮೇಲ್ಭಾಗದಲ್ಲಿ ಇರಿಸುತ್ತಿದ್ದರು. ಪ್ರಾಚೀನ ಕಾಲದ ನಾರಿಯರು ತಮ್ಮ ಪ್ರಿಯಜನರ ಶಿರಸ್ಸಿನ ಮೇಲೆ ಮಂಗಳಕರವಾದ ಧಾನ್ಯ, ದೂರ್ವಾದಿಗಳನ್ನು ಅರ್ಪಿಸುತ್ತಿದ್ದಂತೆ ನೋಡುವವರಿಗೆ ಇದು ತೋರುತ್ತಿತ್ತು. ಮಧ್ಯಾಹ್ನವಾಗುತ್ತಿದ್ದಂತೆ ಅನ್ನ, ದಾಲ್, ತರಕಾರಿಗಳನ್ನು ಅಡಿಗೆ ಮಾಡಿ ಠಾಕೂರರಿಗೆ ನಿವೇದಿಸುತ್ತಿದ್ದರು. ಸಂಧ್ಯೆಯ ನಂತರ ರಾತ್ರಿಯ ಹೊತ್ತು ಪೂರಿ, ರೊಟ್ಟಿ, ಪಲ್ಯ, ಹಾಲು ಹಾಗೂ ಬೆಲ್ಲ ಇತ್ಯಾದಿಗಳನ್ನು ಅರ್ಪಿಸುತ್ತಿದ್ದರು.''

ಶ್ರೀರಾಮಕೃಷ್ಣರೊಂದಿಗೆ ತಮ್ಮ ದಿವ್ಯಸಂಬಂಧದ ಅರಿವು ಶ್ರೀಮಾತೆಗೆ ನಿತ್ಯವೂ ಇರುತ್ತಿತ್ತು; ಪೂಜೆಯ ವೇಳೆಯಲ್ಲಂತೂ ಸ್ಪಷ್ಟವಾಗಿ ಜಾಗೃತವಾಗುತ್ತಿತ್ತು. ಸ್ವಾಮಿ ಗಂಭೀರಾನಂದರ ಅಪೂರ್ವ ವರ್ಣನೆ ಹೀಗಿದೆ: ''ಶ್ರೀರಾಮಕೃಷ್ಣರೊಂದಿಗೆ ಅದೆಂತಹ ಆತ್ಮೀಯತೆ ಇತ್ತು ಶ್ರೀಮಾತೆಗೆ! ಕೊನೆಯ ಬಾರಿ ಕಲ್ಕತ್ತೆಗೆ ಹೋಗುವಾಗ ಶ್ರೀಮಾತೆ ಜಗದಾಂಬಾ ಆಶ್ರಮದಲ್ಲಿ ಒಂದು ರಾತ್ರಿ ವಿಶ್ರಾಂತಿ ಪಡೆದರು. ಬೆಳಿಗ್ಗೆ ಐದು ಘಂಟೆಗೆ ವರದಾ ಮಹಾರಾಜ್ ಹೋಗಿ ನೋಡಿದಾಗ ಆ ವೇಳೆಗಾಗಲೇ ಹಣ್ಣು ಹಾಗೂ ಸಿಹಿತಿಂಡಿಯನ್ನು ನೈವೇದ್ಯ ಮಾಡಿ, ಪೂಜೆಯಾದ ಮೇಲೆ ಠಾಕೂರರ ಪಟವನ್ನು ಒಂದು ಬಟ್ಟೆಯಲ್ಲಿ ಸುತ್ತುತ್ತ ಪೆಟ್ಟಿಗೆಯಲ್ಲಿ ಇಡಲು ತಯಾರಾಗುತ್ತಿದ್ದರು. ಶ್ರೀರಾಮಕೃಷ್ಣರೊಂದಿಗೆ ಮಾತನಾಡುತ್ತ ಹೇಳುತ್ತಿದ್ದರು, ''ಏಳಿ, ಪ್ರಯಾಣ ಹೊರಡಲು ಸಮಯ ಆಯಿತು.'' ಮತ್ತೊಂದು ದಿನದ ಕಥೆ ಹೀಗಿದೆ. ಶ್ರೀಮಾತೆ ಆಗ ಜಯರಾಂಬಾಟಿಯಲ್ಲಿದ್ದರು. ಆ ದಿನ ಜಗದ್ಧಾತ್ರೀ ಪೂಜೆಯಾದ್ದರಿಂದ ಠಾಕೂರರ ನಿತ್ಯಪೂಜೆಯನ್ನು ಶ್ರೀಮಾತೆ ಬೆಳ್ಳಂಬೆಳಿಗ್ಗೆಯೇ ಮುಗಿಸುತ್ತಿದ್ದರು. ನೈವೇದ್ಯ ಮಾಡುವ ಸಮಯದಲ್ಲಿ ಶ್ರೀಮಾತೆ ಹೇಳುತ್ತಿದ್ದುದನ್ನು ಒಬ್ಬರು ಭಕ್ತರು ಕೇಳಿಸಿಕೊಂಡದ್ದು ಹೀಗೆ: ''ನೋಡಿ, ಇವತ್ತು ತಾಯಿಯ ಪೂಜೆಯಿದೆ. ನೀವು ಬೇಗ ಬೇಗ ಊಟ ಮಾಡಿಬಿಡಿ. ನಾನು ಅಲ್ಲಿಗೆ ಹೋಗಬೇಕು.'' ಶ್ರೀಮಾತೆಯವರು ಕಲ್ಕತ್ತೆಯಿಂದ ಹಳ್ಳಿಗೆ ಹೋಗಬೇಕೆಂದು ಒಮ್ಮೆ ಮಾತುಕತೆಯಾಗುತ್ತಿತ್ತು. ಆದರೆ ಒಬ್ಬರ ನಂತರ ಒಬ್ಬರ ಆರೋಗ್ಯ ಕೆಟ್ಟು ಹೋಗುತ್ತಿದ್ದರಿಂದ ತಡವಾಗುತ್ತಿತ್ತು. ಆಗ ಶ್ರೀಮಾತೆ ಠಾಕೂರರಿಗೆ ಹೇಳಿದರು, ''ಜಯರಾಂಬಾಟಿಗೆ ಹೊರಡಿ. ಅಲ್ಲಿನ ದೊಡ್ಡ ಕೆರೆಯ ನೀರು ಹಾಗೂ ತುಳಸಿ ನಿಮಗೆ ಹಿಡಿಸುವುದಿಲ್ಲವೆ?''

ಠಾಕೂರ್ ಹಾಗೂ ದೇವತೆಗಳ ಜೊತೆ ಶ್ರೀಮಾತೆ ಆತ್ಮೀಯವಾಗಿ ವರ್ತಿಸುತ್ತಿದ್ದರೆಂದು ಮಾತ್ರವೇ ಭಾವಿಸಬಾರದು. ಅವರು ತಮ್ಮ ಸ್ವಜನರಂತೆಯೇ ನಡೆದುಕೊಳ್ಳುತ್ತಿದ್ದರು. ಅವರು ಪರಸ್ಪರ ಪ್ರೀತಿಸುತ್ತಿದ್ದರು ಎಂಬುದನ್ನು ತೋರಿಸಲು ಕೆಲವು ಘಟನೆಗಳನ್ನು ಗಮನಿಸೋಣ. ಸ್ವಾಮಿ ಗಂಭೀರಾನಂದರು ಹೀಗೆ ವಿವರಿಸಿದ್ದಾರೆ: ''ಡಾ. ಲಾಲ್ ಬಿಹಾರೀ ಸೇನ್ ಒಮ್ಮೆ ಜಯರಾಂಬಾಟಿಗೆ ಹೋಗಿದ್ದಾಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಆಗ ಶ್ರೀಮಾತೆ ಅವರಿಗೆ ಸ್ವಲ್ಪ ಖಿಚುಡಿಯನ್ನು ತಿನ್ನಲು ಕೊಟ್ಟು ಹೇಳಿದರು, 'ಇದನ್ನು ತಿಂದರೆ ತೊಂದರೆಯಾಗುವುದಿಲ್ಲ. ಏಕೆಂದರೆ ಸ್ವತಃ ಠಾಕೂರರು ಇದನ್ನು ತಿಂದಿದ್ದಾರೆ.' ಡಾಕ್ಟರ್ ಪ್ರಶ್ನಿಸಿದರು, 'ಠಾಕೂರರನ್ನು ನೋಡಬಹುದೆ?' ಶ್ರೀಮಾತೆ ಉತ್ತರಿಸಿದರು, 'ಹ್ಞೂಂ! ಈಚಿನ ದಿನಗಳಲ್ಲಿ ಠಾಕೂರ್ ಆಗಾಗ ಖಿಚುಡಿ ಹಾಗೂ ಥಾನಾ ತಿನ್ನಲು ಇಚ್ಛಿಸುತ್ತಾರೆ.' ಮುಂದುವರಿಸಿ ಹೇಳಿದರು, 'ಪ್ರೀತಿಯಿಂದ ತಿನ್ನಲು ಕರೆದಾಗ ಗೋಪಾಲನೂ ಕೂಡ ಗೆಜ್ಜೆ ಕಾಲ್ಗಳ ಧ್ವನಿಯನ್ನು ಮಾಡುತ್ತ ಹಾಜರಾಗುತ್ತಾನೆ ಮತ್ತು ಸಂತೋಷದಿಂದ ತಿನ್ನುತ್ತಾನೆ.' ಒಬ್ಬ ಭಕ್ತ ಮಹಿಳೆಯು ಒಂದು ದಿನ ಮಧ್ಯಾಹ್ನ ದೇವರ ಕೋಣೆಯನ್ನು ಪ್ರವೇಶಿಸಿದಾಗ ಶ್ರೀಮಾತೆ ನವವಧುವಿನಂತೆ ನಾಚಿಕೆಯಿಂದ ಠಾಕೂರರನ್ನು ಕರೆಯುತ್ತಿದ್ದರು, 'ಬನ್ನಿ, ಊಟಕ್ಕೆ ಬನ್ನಿ.' ಮತ್ತೆ ಗೋಪಾಲನ ವಿಗ್ರಹದ ಬಳಿ ಹೋಗಿ,'ಬಾ, ಗೋಪಾಲ್, ಊಟಕ್ಕೆ ಬಾ,' ಎಂದರು. ಆ ಮಹಿಳೆಯು ನೋಡುತ್ತಿದ್ದುದನ್ನು ಇದ್ದಕ್ಕಿದ್ದಂತೆ ಗಮನಿಸಿದ ಶ್ರೀಮಾತೆ ನಗುತ್ತ ಹೇಳಿದರು, 'ಎಲ್ಲರನ್ನೂ ಊಟಕ್ಕೆ ಕರೆಯುತ್ತಿದ್ದೆ.' ಹೀಗೆ ಹೇಳಿ ಶ್ರೀಮಾತೆ ಊಟದ ಮನೆಯ ಕಡೆಗೆ ನಡೆಯಲು ಪ್ರಾರಂಭಿಸಿದಾಗ ಎಲ್ಲ ದೇವತೆಗಳೂ ಅವರನ್ನು ಹಿಂಬಾಲಿಸುತ್ತಿದ್ದಂತೆ ಆ ಮಹಿಳೆಗೆ ತೋರಿತು.''

ಇಂತಹ ಅನುರಾಗ, ಈ ರೀತಿಯ ಪರಮ ಆತ್ಮೀಯತೆಯ ಬುದ್ಧಿ ಹಾಗೂ ಪೂಜನೀಯ ದೇವತೆಗೆ ಹೃದಯವನ್ನೇ ಅರ್ಪಿಸುವ ವಿಧಾನಗಳಿಂದ ಪೂಜೆ ಸಾರ್ಥಕವಾಗುತ್ತದೆ ಹಾಗೂ ಪೂಜ್ಯ-ಪೂಜಕರನ್ನು ಒಗ್ಗೂಡಿಸುವ ಬಿಡಿಸಲಾರದ ಬಂಧನವುಂಟಾಗುತ್ತದೆ. ಇದು ಪೂಜೆಯ ಒಂದು ಅಂಗ. ಮತ್ತೊಂದು ದೃಷ್ಟಿಯಿಂದ ಹೇಳುವುದಾದರೆ, ಪರಾಪೂಜೆ ಅಥವಾ ಅತ್ಯಂತ ಶ್ರೇಷ್ಠವಾದ ಪೂಜೆಯಲ್ಲಿ ಪೂಜ್ಯ ಹಾಗೂ ಪೂಜಕರ ನಡುವೆ ಇರುವ ಯಾವುದೇ ಸಂಬಂಧ, ಅದು ಎಷ್ಟೇ ಗಾಢವಾಗಿರಲಿ ಅಥವಾ ಅಂತರಂಗದ್ದಾಗಿರಲಿ, ವಿಲೀನವಾಗಿ ಹೋಗುತ್ತದೆ. **ಪರಾಪೂಜಾ ಸ್ತೋತ್ರ**ದಲ್ಲಿ ಈ ವಿಚಾರದ ಬಗ್ಗೆ ಶಂಕರಾಚಾರ್ಯರು ಹೇಳಿದ್ದಾರೆ:

**ಏವಮೇವ ಪರಾಪೂಜಾ ಸರ್ವಾವಸ್ಥಾಸು ಸರ್ವದಾ।**
**ಏಕಬುದ್ಧ್ಯಾ ತು ದೇವೇಶೇ ವಿಧೇಯಾ ಬ್ರಹ್ಮವಿತ್ತಮೈಃ॥**

'ಪರಮೇಶ್ವರನೊಂದಿಗೆ ಅಭೇದದೃಷ್ಟಿಯಿಂದಲೇ ಶ್ರೇಷ್ಠ ಬ್ರಹ್ಮಜ್ಞಾನಿಗಳು ಪರಮಪೂಜೆಯನ್ನು ಮಾಡುತ್ತಾರೆ.' ಹಾಗೆ ನೋಡಿದರೆ, ಒಂದು ಸ್ವಲ್ಪವಾದರೂ ಪೂಜ್ಯ ದೇವತೆಯೊಂದಿಗೆ ತನ್ನ ತಾದಾತ್ಮ್ಯವನ್ನು ಕಂಡುಕೊಳ್ಳದಿದ್ದಲ್ಲಿ, ಏಕಾತ್ಮತೆ ಅನುಭವವಾಗದಿದ್ದಲ್ಲಿ ಅಂತಹ ಪೂಜಾರಿಗೆ ಪೂಜೆ ಮಾಡುವ ಅಧಿಕಾರವೇ ಉಂಟಾಗುವುದಿಲ್ಲ. ಆದ್ದರಿಂದ ಶಾಸ್ತ್ರ ಹೇಳುತ್ತದೆ, **'ದೇವೋ ಭೂತ್ವಾ ದೇವಂ ಯಜೇತ್, ನಾದೇವೋ ದೇವಮರ್ಚಯೇತ್.'** – 'ದೇವತೆಯಾಗಿ ರೂಪಾಂತರ ಹೊಂದಿದ ಬಳಿಕವೇ ಪೂಜೆ ಮಾಡು, ದೇವತೆಯಾಗಲು ಸಾಧ್ಯವಿಲ್ಲದಿದ್ದರೆ ಪೂಜೆ ಮಾಡಬೇಡ.' ಮತ್ತೊಂದು ಪ್ರಸಿದ್ಧ ಉಕ್ತಿಯೂ ಇದೆ : **'ಅವಿಷ್ಣುಃ ಪೂಜಯನ್ ವಿಷ್ಣುಂ ನ ಪೂಜಾ ಫಲಭಾಗ್ ಭವೇತ್'** –– 'ಯಾರು ಸ್ವರೂಪತಃ ವಿಷ್ಣುವಲ್ಲವೋ ಅಂತಹ ವ್ಯಕ್ತಿ ವಿಷ್ಣು ಪೂಜೆಯ ಫಲವನ್ನು ಪಡೆಯಲು ಅನರ್ಹ.'

ಇಲ್ಲಿಯತನಕ ನಾವು ದ್ವೈತ ದೃಷ್ಟಿಯನ್ನು ಅವಲಂಬಿಸಿ ಶ್ರೀಮಾತೆ ಯಾವ ರೀತಿಯಲ್ಲಿ ಠಾಕೂರರ ಪೂಜೆಯನ್ನು ಮಾಡುತ್ತಿದ್ದರು ಎಂದು ವರ್ಣಿಸಿದೆವು. ಅವರಿಬ್ಬರೂ ಬೇರೆ ಬೇರೆ ಎಂದು ತೋರುವುದಾದರೂ ಮೂಲತಃ ಠಾಕೂರರು ಹಾಗೂ ಶ್ರೀಮಾತೆ ಒಂದೇ ಸತ್ಯದ, ಒಂದೇ ತತ್ತ್ವದ ಸ್ವರೂಪ. ಒಮ್ಮೆ ಸ್ವಾಮಿ ತನ್ಮಯಾನಂದರು ಜಯರಾಂಬಾಟಿಗೆ ಹೋಗಿ ಶ್ರೀಮಾತೆಯ ಪಾದಪೂಜೆಯನ್ನು ಮಾಡಿದರು. ಅವರ ಪಾದಗಳನ್ನು ತಲೆಯ ಮೇಲಿರಿಸಿಕೊಂಡಾಗ ಶ್ರೀಮಾತೆ ಅದನ್ನು ತಡೆಗಟ್ಟಿ, ಪಾದವನ್ನು ತಲೆಯ ಮೇಲಿರಿಸಬಾರದೆಂದೂ, ಸಹಸ್ರದಳ ಪದ್ಮದಲ್ಲಿ ಸಾಕ್ಷಾತ್ ಭಗವಂತನಾದ ಠಾಕೂರರು ಕುಳಿತಿರುತ್ತಾರೆಂದೂ ಹೇಳಿದರು. ಆಗ ತನ್ಮಯಾನಂದರು ಕೇಳಿದರು, ''ಅಮ್ಮಾ, ಠಾಕೂರರು ಸ್ವಯಂ

ಭಗವಾನ್ ಆದರೆ, ನೀವೇನು?'' ಎಳ್ಳಷ್ಟೂ ಸಂದೇಹವಿಲ್ಲದೆ, ಸ್ವಲ್ಪವೂ ತಡೆಯಿಲ್ಲದೆ ಶ್ರೀಮಾತೆ ಉತ್ತರಿಸಿದರು, ''ನಾನಿನ್ನೇನು? ನಾನೂ ಭಗವತಿ.''

ತಮ್ಮ ನಿಜಸ್ವರೂಪದ ಬಗ್ಗೆ ನಿತ್ಯವೂ ಸಚೇತನರಾಗಿದ್ದಾಗ ಶ್ರೀಮಾತೆ ಅನೇಕ ಬಾರಿ ಆತ್ಮಪ್ರಕಾಶ ಮಾಡಿಕೊಂಡಿದ್ದಾರೆ ಹಾಗೂ ಆ ಅರಿವಿನ ಆಧಾರದ ಮೇಲೆಯೇ ಕೋಯೆಲ್‌ಪಾರಾದಲ್ಲಿ ಠಾಕೂರರ ಚಿತ್ರದ ಪಕ್ಕದಲ್ಲಿ ತಮ್ಮ ಚಿತ್ರವನ್ನಿಟ್ಟು ತಾವೇ ಪೂಜೆ ಮಾಡಿದ್ದಾರೆ. ೧೯೧೧ರ ನವೆಂಬರ್ ತಿಂಗಳಲ್ಲಿ ಈ ಅತ್ಯಾಶ್ಚರ್ಯದ ಘಟನೆ ನಡೆಯಿತು. 'ಶ್ರೀಮಾತೆ ಶಾರದಾದೇವಿ' ಗ್ರಂಥದಲ್ಲಿದೆ: ''ಕೋಯಲ್‌ಪಾರಾ ಆಶ್ರಮದಲ್ಲಿ ಠಾಕೂರರ ಪಟವನ್ನು ಶ್ರೀಮಾತೆ ಪ್ರತಿಷ್ಠಾಪಿಸುವುದೆಂದು ಭಕ್ತ ಜನರು ಪೂಜೆಯ ಎಲ್ಲ ವ್ಯವಸ್ಥೆಯನ್ನೂ ತಮಗೆ ಸಾಧ್ಯವಾದಷ್ಟು ಮಾಡಿದ್ದರು. ಶ್ರೀಮಾತೆಯವರು ಆಶ್ರಮವನ್ನು ತಲುಪಿ, ಸ್ನಾನ ಮಾಡಿ ಬಂದು ಸಿಂಹಾಸನದ ಮೇಲೆ ಶ್ರೀ ರಾಮಕೃಷ್ಣರ ಪಟದೊಂದಿಗೆ ತಮ್ಮ ಪಟವನ್ನೂ ಸ್ಥಾಪಿಸಿ, ಯಥಾವಿಧಿ ಪೂಜೆ ಮಾಡಿದರು.''

ಯಾರು ತನ್ನ ಪ್ರಚಾರವನ್ನು ಸಾಮಾನ್ಯವಾಗಿ ಮಾಡುವುದಿಲ್ಲವೋ ಅಂತಹವರ ಈ ವಿಶೇಷ ಆಚರಣೆಗಳನ್ನು ಅಲೌಕಿಕವೆಂದು ತಿಳಿಯುವುದರಲ್ಲಿ ತಪ್ಪೇನಿಲ್ಲ. ಉಚ್ಚಕೋಟಿಯ ಸಾಧಕರೂ ಇಷ್ಟದೇವತೆಯ ಅಥವಾ ಪೂಜ್ಯದೇವತೆಯ ಜೊತೆಗೆ ಏಕಾತ್ಮ ಭಾವವನ್ನು ಅನುಭವಿಸುತ್ತಾರೆ. ಆದರೆ ಸಾಧಾರಣ ಮಟ್ಟಕ್ಕೆ ಇಳಿದು ಬಂದು, 'ನಾನೇ ಇಷ್ಟದೇವತೆಯ ಸ್ವರೂಪ, ಆದ್ದರಿಂದ ಪೂಜ್ಯ' ಎಂಬ ಅರಿವಿನಲ್ಲಿ ನೆಲೆ ನಿಂತು ತಾನೇ ತನ್ನನ್ನು ಪೂಜಿಸಿಕೊಳ್ಳುವುದು ಅಸ್ವಾಭಾವಿಕವೇ ಸರಿ.

ಸ್ವಾಮಿ ಅಪೂರ್ವಾನಂದರು ಬರೆದ 'ದೇವಲೋಕೇ' ಗ್ರಂಥದಲ್ಲಿ ಶ್ರೀಮಾತೆ ತಮ್ಮ ಪೂಜೆಯನ್ನು ತಾವೇ ಮಾಡಿಕೊಂಡ ಅದ್ಭುತ ವಿವರಣೆಯಿದೆ: ''ಶ್ರೀಮಾತೆ ಒಂದೆರಡು ದಿನಗಳಲ್ಲಿ ಕಲ್ಕತ್ತೆಗೆ ಹೋಗುವುದಿತ್ತು. ಒಂದು ದಿನ ಬೆಳಿಗ್ಗೆ ತಮ್ಮದೇ ಒಂದು ಭಾವಚಿತ್ರವನ್ನು ಬಟ್ಟೆಯಲ್ಲಿ ಸುತ್ತಿಕೊಂಡು (ಕಾಶಿ) ಅದ್ವೈತ ಆಶ್ರಮಕ್ಕೆ ತೆಗೆದುಕೊಂಡು ಹೋದರು. ದೇವಸ್ಥಾನದಲ್ಲಿ ಠಾಕೂರರಿಗೆ ಪ್ರಣಾಮ ಸಲ್ಲಿಸಿ, ಪೂರ್ವದಿಕ್ಕಿನ ಗೋಡೆಯಲ್ಲಿದ್ದ ಖಾಲಿ ಕವಾಟದಲ್ಲಿ ತಮ್ಮ ಚಿತ್ರವನ್ನು ಇರಿಸಿ, ಒಂದೆರಡು ಪುಷ್ಪಗಳನ್ನು ಅರ್ಪಿಸಿದರು. ಆ ಹೂಗಳನ್ನು ತಮ್ಮ ಸೀರೆಯಲ್ಲಿ ಗಂಟುಕಟ್ಟಿ ತಂದಿದ್ದರು. ದೇವಸ್ಥಾನದಿಂದ ಹೊರಗೆ ಬಂದೊಡನೆ ಚಂದ್ರನನ್ನು ಕರೆದು ಶ್ರೀಮಾತೆ ಹೇಳಿದರು, ''ಅಪ್ಪಾ ಚಂದ್ರ, ಇದಕ್ಕೆ ದಿನವೂ ಒಂದೆರಡು ಹೂಗಳನ್ನರ್ಪಿಸು.''

ಭಕ್ತ ಲಲಿತಮೋಹನ ಚಟ್ಟೋಪಾಧ್ಯಾಯನ ಕೋರಿಕೆಯ ಮೇರೆಗೆ ಅವನ ಮನೆಯಲ್ಲಿ ಸ್ಥಾಪಿಸಿದ್ದ ತಮ್ಮದೇ ಆದ ತೈಲಚಿತ್ರಕ್ಕೆ ಶ್ರೀಮಾತೆ ಹೂವು, ಚಂದನಗಳಿಂದ ಪೂಜೆ ಮಾಡಿದ್ದರು. ಸ್ವಾಮಿ ನಿರ್ಲೇಪಾನಂದರ ನೆನಪುಗಳಿಂದ ನಮಗಿದು ತಿಳಿದುಬರುತ್ತದೆ. ಅವರು ಹೇಳಿರುವಂತೆ, ''ಅದೆಷ್ಟು ಬಾರಿ ಲಲಿತ್ ನನಗೆ ತನ್ನ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಗರ್ವದಿಂದ ಹೇಳಿಕೊಂಡಿದ್ದಾನೆ: 'ಉದ್ಬೋಧನ'ದ ಮನೆ ನಿರ್ಮಾಣವಾಗುವ ಬಹಳ ಮೊದಲೇ ಶಾಂಖಾರಿಟೋಲಾದಲ್ಲಿದ್ದ ನನ್ನ ಬಾಡಿಗೆ ಮನೆಗೆ ಶ್ರೀಮಾತೆಯವರು ಆಗಮಿಸಿ, ನಾನು ಕೇಳಿಕೊಂಡೆನೆಂದು ತಮ್ಮದೇ ತೈಲಚಿತ್ರಕ್ಕೆ ಪುಷ್ಪಚಂದನಗಳನ್ನು ಅರ್ಪಿಸಿ ಪೂಜೆ ಮಾಡಿ ನನಗೆ ದೀಕ್ಷೆ ಕರುಣಿಸಿದರು.' '' ಈ ಘಟನೆ ೧೯೦೮ರಲ್ಲಿ ನಡೆಯಿತು.

ಶ್ರೀರಾಮಕೃಷ್ಣರನ್ನು ಭಕ್ತರು ಸರ್ವದೇವದೇವೀ ಸ್ವರೂಪರೆಂದು ಶ್ರದ್ಧೆಯಿಂದ ಪೂಜಿಸುತ್ತಾರೆ. ಅಂತೆಯೇ ಶ್ರೀಮಾತೆಯವರನ್ನೂ ಸರ್ವದೇವದೇವಿಸ್ವರೂಪಿಣಿ ಎಂದು ಕರೆಯುತ್ತಾರೆ. ಹಾಗೆ ಕರೆಯುವುದರಲ್ಲಿ ಯಾವುದೇ ತಪ್ಪಿಲ್ಲ. ಅದು ಯಾವುದೇ ತಾತ್ಕಾಲಿಕ ಉದ್ವೇಗದಿಂದಲ್ಲ. ಶ್ರೀಮಾತೆಯವರನ್ನು ಸರ್ವದೇವದೇವೀಸ್ವರೂಪಿಣೀಯಾಗಿ ಅನೇಕರು ಕಂಡಿದ್ದಾರೆ. ಶ್ರೀಮಾತೆಯವರನ್ನು ಜಗದ್ಧಾತ್ರಿಯಾಗಿ, ಕಾಳಿಯಾಗಿ, ಬಗಲಾ ರೂಪದಲ್ಲಿ ಹಾಗೂ ಇನ್ನೂ ಇತರ ರೂಪಗಳಲ್ಲಿ ಅನೇಕರು ದರ್ಶನ ಪಡೆದಿದ್ದಾರೆ. ಶ್ರೀಮಾತೆ ತಾವೇ ಸ್ವತಃ ಈ ಸ್ವರೂಪಗಳ ಸತ್ಯತೆಯನ್ನು ಅಂಗೀಕರಿಸಿದ್ದಾರೆ. ಕೇವಲ ಕಾಳಿ, ದುರ್ಗೆ ಮಾತ್ರವಲ್ಲ, ಬಂಗಾಳದ ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಪೂಜಿಸಲ್ಪಡುವ ಹಾಗೂ ಮೂಢನಂಬಿಕೆಗಳೆಂದು ಹೇಳಲ್ಪಡುವ ಷಷ್ಠೀ, ಮಾನಸಾ ಇತ್ಯಾದಿ ದೇವ-ದೇವಿಗಳೂ ತಾವೇ ಎಂದು ಶ್ರೀಮಾತೆಯವರು ಹೇಳಿದ್ದಾರೆ. ಒಂದು ದಿನ ಸ್ವಾಮಿ ಕೇಶವಾನಂದರು ಶ್ರೀಮಾತೆಗೆ ಹೇಳಿದರು, ''ಅಮ್ಮಾ, ನಿಮ್ಮ ನಂತರ ಷಷ್ಠಿ, ಶೀತಲಾ ಮುಂತಾದ ದೇವತೆಗಳನ್ನು ಇನ್ನು ಮೇಲೆ ಯಾರೂ ಒಪ್ಪಿಕೊಳ್ಳುವುದಿಲ್ಲ.'' ಆಗ ಶ್ರೀಮಾತೆ ಹೇಳಿದರು, ''ಏಕೆ ಒಪ್ಪಲಾರರು? ಅವರು ನನ್ನ ಅಂಶವೇ ತಾನೆ?'' ಮತ್ತೊಂದು ದಿನ ಜಗದಂಬಾ ಆಶ್ರಮದಲ್ಲಿ ಕೇಶವಾನಂದರು ಶ್ರೀಮಾತೆಯವರೊಂದಿಗೆ ಕುಳಿತುಕೊಂಡು ಮಾತನಾಡುತ್ತಿದ್ದಾಗ ಸ್ವಲ್ಪ ದೂರದಲ್ಲೇ ಇದ್ದ ವಟವೃಕ್ಷದಡಿಯಲ್ಲಿ ಷಷ್ಠೀಪೂಜೆ ಮಾಡಲು ಒಂದಿಷ್ಟು ಜನ ಡೋಲು ಬಾರಿಸುತ್ತಾ ಬಂದರು. ಮಾತುಕತೆಯಾಡಲು ತೊಂದರೆಯಾಗುತ್ತಿದ್ದುದರಿಂದ ಕೇಶವಾನಂದರು ಅವರಿಗೆ, ''ಓ! ನಿಲ್ಲಿಸಿರಪ್ಪ ಸಾಕು'' ಎಂದು ತಿರಸ್ಕಾರದೊಂದಿಗೆ ಹೇಳಿದರು. ಕೂಡಲೇ ಶ್ರೀಮಾತೆ ತಡೆದು ಹೇಳಿದರು, ''ಅದೇಕೆ ಕೇದಾರ್, ಎಲ್ಲವೂ ನಾನೇ ತಾನೇ! ನೀನೇಕೆ ಬೇಜಾರು ಮಾಡಿಕೊಳ್ಳುವೆ?''

ಶ್ರೀಮಾತೆಯವರಲ್ಲಿ ಶ್ರೀರಾಮಕೃಷ್ಣರು ವಿರಾಜಮಾನರಾಗಿದ್ದರು ಎಂಬುದು ಈ ಕೆಳಗೆ ಹೇಳಿರುವ ಘಟನೆಯಿಂದ ಸ್ಪಷ್ಟವಾಗಿ ಸೂಚಿತವಾಗುವುದು. ನರೇಶ ಚಕ್ರವರ್ತಿ ಒಮ್ಮೆ ದೀಕ್ಷೆ ಪಡೆಯಬೇಕೆಂದಿದ್ದ ಇಬ್ಬರು ಸ್ನೇಹಿತರೊಂದಿಗೆ ಜಯರಾಂಬಾಟಿಗೆ ಬಂದಾಗ ಅವನಿಂದ ಪೂಜೆ ಸ್ವೀಕರಿಸುವ ಉದ್ದೇಶದಿಂದ ಶ್ರೀಮಾತೆ ಹೂಗಳನ್ನು ತರಲು ಹೇಳುತ್ತ ಆದೇಶಿಸಿದರು, ''ನಾನು ಹಳದಿ ಬಣ್ಣದ ಹೂವನ್ನು ಇಷ್ಟಪಡುತ್ತೇನೆ, ಮತ್ತು ಠಾಕೂರರಿಗೆ ಬಿಳಿ ಹೂವು ಇಷ್ಟ. ಎರಡೂ ಬಣ್ಣದ ಹೂಗಳನ್ನು ತರುವಂತೆ ಕಿಶೋರಿಗೆ ತಿಳಿಸು.'' ಎರಡೂ ಬಣ್ಣದ ಹೂಗಳನ್ನು ಕಿಶೋರಿ ಮಹಾರಾಜರಿಂದ ಪಡೆದುಕೊಂಡು, ನರೇಶ್‌ಬಾಬು ಓಡಿ ಬಂದು ನೋಡಿದಾಗ, ಶ್ರೀಮಾತೆ ಅದೇ ಜಾಗದಲ್ಲಿ ನಿಂತಿದ್ದರು. ಎಡಪಾದಕ್ಕೆ ಹಳದಿ ಹೂವು ಹಾಗೂ ಬಲಪಾದಕ್ಕೆ ಬಿಳಿ ಹೂವನ್ನು ಸಮರ್ಪಿಸುವಂತೆ ಶ್ರೀಮಾತೆ ಸಂಜ್ಞೆಗಳಿಂದ ಸೂಚಿಸಿದಾಗ ನರೇಶ್‌ಬಾಬು ವ್ಯಾಕುಲ ಹೃದಯದಿಂದ

ಪುಷ್ಪಾಂಜಲಿಯನ್ನು ಅರ್ಪಿಸಿ ಪ್ರಾರ್ಥಿಸಿದರು, ''ಅಮ್ಮಾ, ನಾನು ಇಹಕಾಲ ಹಾಗೂ ಪರಕಾಲದ ಎಲ್ಲ ಫಲಗಳನ್ನೂ ನಿಮಗೆ ಸಮರ್ಪಿಸಿರುವೆ.'' ತಮ್ಮ ಸ್ವಂತ ಇಚ್ಛೆಯಿಂದ ಪೂಜೆಯನ್ನು ಸ್ವೀಕರಿಸಿ, ತಮ್ಮ ದೇಹದಲ್ಲೇ ಶಿವ-ಶಕ್ತಿಯ ಸಮಾಗಮವಾಗಿದೆ ಎಂಬುದನ್ನು ಶ್ರೀಮಾತೆ ತೋರಿಸಿದರು. ಆದ್ದರಿಂದ ಠಾಕೂರರಿಗೆ ಬಿಳಿ ಹಾಗೂ ಶ್ರೀಮಾತೆಗೆ ಹಳದಿ ಹೂವು!

ಪೂಜ್ಯ ದೇವತೆಯೊಂದಿಗೆ ತಾನು ಅಭೇದವೆಂಬ ಭಾವವನ್ನು ದೃಢವಾಗಿ ಪೂಜಾರಿ ಅವಲಂಬಿಸಿದ್ದೇ ಆದರೆ ಇನ್ನು ಪೂಜೆ ಸಾಧ್ಯವಾಗದು. ಆದ್ದರಿಂದ ತಾನೇ ಬಯಸಿ ಪೂಜಾರಿಯು ಭೇದಭಾವವನ್ನು ತಾಳುತ್ತಾನೆ. ಶಂಕರಾಚಾರ್ಯರು ರಚಿಸಿರುವ ವಿಷ್ಣುಷಟ್ಪದಿಯಲ್ಲಿ ಈ ವಿಚಾರವನ್ನು ಹೀಗೆ ವಿವರಿಸಿದ್ದಾರೆ:

**ಸತ್ಯಪಿ ಭೇದಾಪಗಮೇ ನಾಥ ತವಾಽಹಂ ನ ಮಾಮಕೀನಸ್ತ್ವಮ್ ॥**
**ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ ॥**

— 'ಹೇ ನಾಥ, ದ್ವೈತಬುದ್ಧಿ ಲೋಪವಾಗಿದ್ದರೂ ನಾನು ನಿನ್ನವನೇ, ನೀನು ನನ್ನವನಲ್ಲ. ಏಕೆಂದರೆ ಎಂದಿಗೂ ಸಮುದ್ರದ್ದೇ ತರಂಗ, ತರಂಗದಿಂದ ಯಾವತ್ತೂ ಸಮುದ್ರ ಉದ್ಭವಿಸುವುದಿಲ್ಲ.'

ಅನೇಕ ವೇಳೆ ತಮ್ಮನ್ನು ಶ್ರೀರಾಮಕೃಷ್ಣರೊಂದಿಗೆ ಅಭಿನ್ನವೆಂದು ಶ್ರೀಮಾತೆ ಒಪ್ಪಿಕೊಂಡಿದ್ದರೂ ಠಾಕೂರರನ್ನು ಬಿಟ್ಟು ತನ್ನ ಪೂಜೆಯನ್ನೇ ಮಾಡಬೇಕೆಂದು ಭಕ್ತರಿಗೆ ಅವರೆಂದೂ ನಿರ್ದೇಶಿಸಿಲ್ಲ. ಈ ಸಂಬಂಧವಾಗಿ ಎರಡು ಘಟನೆಗಳನ್ನು ಉಲ್ಲೇಖಿಸಬಹುದು: ಜಯರಾಂಬಾಟಿಯಲ್ಲಿ ಸ್ವಾಮಿ ಸಾಧನಾನಂದರಿಗೆ ದೀಕ್ಷೆಯನ್ನು ನೀಡಿದ ಮೇಲೆ ಶ್ರೀಮಾತೆ ಠಾಕೂರರ ಪಟವನ್ನು ತೋರಿಸುತ್ತ ಹೇಳಿದರು, ''ಇವರೇ ಗುರು.'' ಶಿಷ್ಯ ಪ್ರಶ್ನಿಸಿದ, ''ಅಮ್ಮಾ, ಠಾಕೂರರು ಗುರು ಎಂದು ನೀವೇ ಹೇಳಿದಿರಿ; ಹಾಗಾದರೆ ನೀವು ಯಾರು?'' ಶ್ರೀಮಾತೆ ಉತ್ತರಿಸಿದರು, ''ಅಪ್ಪ, ನಾನೇನೂ ಅಲ್ಲ — ಠಾಕೂರರೇ ಇಷ್ಟದೇವತೆ.''

ಎರಡನೆಯ ಘಟನೆ. ಮಾನದಾಶಂಕರ್ ದಾಸ್‌ಗುಪ್ತ ಶ್ರೀಮಾತೆಯವರ ಬಳಿಗೆ ಬಂದು ಕೇಳಿದ್ದರು, ''ಅಮ್ಮಾ, ಉಪಾಸನೆಯ ಸಮಯದಲ್ಲಿ ಠಾಕೂರರ ನಾಮವನ್ನು ಜಪಿಸುವುದು ಆವಶ್ಯಕವೆ?'' ಶ್ರೀಮಾತೆ ಹೇಳಿದರು, ''ಹೌದು, ಹಾಗೆ ಮಾಡಬೇಕು.'' ಭಕ್ತ ಮತ್ತೆ ಕೇಳಿದ, ''ಏಕೆ, ಅವರೇಕೆ ಬೇಕು? ನೀವು ಮತ್ತು ಠಾಕೂರ್ ಒಂದೇ ಅಲ್ಲವೆ?'' ಈ ಮಾತುಗಳನ್ನು ಕೇಳಿ ಶ್ರೀಮಾತೆ ತಕ್ಷಣ ಹೇಳಿದರು, ''ಇಲ್ಲ, ಇಲ್ಲ. ಒಂದೇ ಆದರೂ ಠಾಕೂರರನ್ನು ಬಿಟ್ಟುಬಿಡಲು ನಾನೆಂದೂ ಹೇಳಲಾರೆ.''

ಸಮಾಜದಲ್ಲಿ ಮಾನವರು ಧರ್ಮವನ್ನು ಹೇಗೆ ಅನುಷ್ಠಾನ ಮಾಡಬೇಕು ಎನ್ನುವುದಕ್ಕೆ ಆಧಾರ ಯಾವುದು ಅಥವಾ ಯಾರ ಆದೇಶಗಳನ್ನು ಒಪ್ಪಿಕೊಂಡು ಧರ್ಮವನ್ನು ಆಚರಿಸಬೇಕು? ಈ ವಿಚಾರವಾಗಿ ಮಹರ್ಷಿ ಮನು ಹೇಳಿದ್ದಾನೆ:

**ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।**
**ಏತಚ್ಚತುರ್ವಿಧಂ ಗ್ರಾಹ್ಯಂ ಸಾಕ್ಷಾದ್ಧರ್ಮಸ್ಯ ಲಕ್ಷಣಮ್ ॥**

*(ಮನುಸಂಹಿತಾ ೩.೧೩)*

'ವೇದ, ಸ್ಮೃತಿ, ಸದಾಚಾರ ಹಾಗೂ ನಮ್ಮ ಅಂತರಂಗ — ಈ ನಾಲ್ಕನ್ನು ಧರ್ಮದ ಪ್ರತ್ಯಕ್ಷ ಪ್ರಮಾಣಗಳೆಂದು ಸ್ವೀಕರಿಸಬೇಕು.'

ಸದ್‌ವ್ಯಕ್ತಿಗಳ ಅಥವಾ ಶಿಷ್ಟವ್ಯಕ್ತಿಗಳ ಆಚರಣೆಯೇ ಸದಾಚಾರ. ದೇಶಧರ್ಮ, ಜಾತಿಧರ್ಮ, ಕುಲಧರ್ಮ ಇತ್ಯಾದಿಗಳಾಗಿ ಸದಾಚಾರವನ್ನು ವಿಂಗಡಿಸಬಹುದು. ಪರಂಪರೆಯು ಈ ಎಲ್ಲ ಆಚಾರ, ನಡವಳಿಕೆಗಳನ್ನು ಆಧರಿಸಿದೆ. ಆದ್ದರಿಂದ ಇವೆಲ್ಲ ಪ್ರಯೋಜನವಿಲ್ಲದವು, ಗೌಣ ಅಥವಾ ಪುರಾವೆ ಇಲ್ಲದ ಕುಸಂಸ್ಕಾರಗಳೆಂದು ಕರೆಯಲಾಗುವುದಿಲ್ಲ. ಈ ವಿಚಾರವಾಗಿ ಶ್ರೀಮಾತೆಯವರು ಬದುಕಿದ್ದಾಗ, ೧೯೧೨ರ ದುರ್ಗಾಪೂಜೆಯ ಸಂದರ್ಭದಲ್ಲಿ ಬೇಲೂರು ಮಠದಲ್ಲಿ ನಡೆದ ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು :

ವಿಜಯದಶಮಿಯ ದಿನದಂದು ಯಾವ ನೌಕೆಯಲ್ಲಿ ದೇವಿಯನ್ನು ಗಂಗೆಯಲ್ಲಿ ವಿಸರ್ಜನೆ ಮಾಡಲು ಕೊಂಡೊಯ್ಯಲಾಗುತ್ತಿತ್ತೋ, ಆ ನೌಕೆಯಲ್ಲಿ ಡಾ. ಕಂಜೀಲಾಲ್ ದೇವಿಯ ಮುಂದೆ ನಾನಾ ರೀತಿಯಲ್ಲಿ ಮುಖಭಂಗಿ, ವ್ಯಂಗ್ಯಗಳನ್ನು ಮಾಡುತ್ತಿದ್ದರು. ಅಲ್ಲಿ ನೆರೆದಿದ್ದ ಅನೇಕರು ಇದೆಲ್ಲವನ್ನೂ ನೋಡಿ ನಗುವಿನಲ್ಲಿ ಮುಳುಗಿಹೋದರು. ಆದರೆ ಆಧುನಿಕ ರೀತಿಯ ಒಬ್ಬ ಬ್ರಹ್ಮಚಾರಿ ಇದೆಲ್ಲವನ್ನೂ ಕಂಡು ಕೋಪಿಸಿಕೊಳ್ಳುತ್ತಿದ್ದ. ಇದೆಲ್ಲವನ್ನೂ ಶ್ರೀಮಾತೆ ತಮ್ಮ ಕೋಣೆಯಲ್ಲೇ ಕುಳಿತುಕೊಂಡು ನೋಡುತ್ತಾ ಆನಂದಿಸುತ್ತಿದ್ದರು. ಅಂತಹ ಸಮಯದಲ್ಲಿ ಒಬ್ಬ ಸಾಧು ಮೇಲೆ ಹೇಳಿದ ಆ ಬ್ರಹ್ಮಚಾರಿಯನ್ನು ಶ್ರೀಮಾತೆಯವರಿಗೆ ತೋರಿಸಿದಾಗ ಅವರು ಕೂಡಲೇ ಹೇಳಿದರು, ''ಇಲ್ಲ, ಇಲ್ಲ, ಇದೆಲ್ಲ ಸರಿಯೇ. ಹಾಡು, ವಾದ್ಯ, ಕುಣಿತ, ವ್ಯಂಗ್ಯಗಳು ಇವುಗಳ ಮೂಲಕ ದೇವಿಯನ್ನು ಸಂತೋಷಪಡಿಸಬೇಕು.''

ತೀರ್ಥಕ್ಷೇತ್ರಗಳಲ್ಲಿ ಪ್ರಾಚೀನ ರೀತಿಗಳನ್ನು ಪಾಲಿಸಬೇಕು ಎಂಬುದರ ಬಗ್ಗೆ ಈ ಕೆಳಗಿನ ಘಟನೆ ಉಲ್ಲೇಖಯೋಗ್ಯ : ಜಗನ್ನಾಥ ಕ್ಷೇತ್ರದಲ್ಲಿ ಪದ್ಧತಿ ಏನೆಂದರೆ, ಅಲ್ಲಿ ಪ್ರಸಾದವನ್ನು ಸ್ವೀಕರಿಸುವ ಸಮಯದಲ್ಲಿ ಜಾತಿವಿಚಾರ ಮಾಡುವುದಿಲ್ಲ. ಮಂದಿರದೊಳಗಿರುವ 'ಆನಂದ ಬಜಾರ್'ನಲ್ಲಿ ಯಾತ್ರಿಕರು ಒಬ್ಬರೊಬ್ಬರ ಬಾಯಿಗೆ ಪ್ರಸಾದವನ್ನು ನೀಡಿ, ಎಲ್ಲರ ಕೈಗಳಿಂದಲೂ ಪ್ರಸಾದವನ್ನು ಸ್ವೀಕರಿಸುತ್ತಾರೆ; ಅವರು ಚಂಡಾಲರಾಗಿದ್ದರೂ ಸರಿಯೇ! ಸಾಕಷ್ಟು ಹಿಂದಿನಿಂದ ಬಂದಿರುವ ಈ ಪದ್ಧತಿಯನ್ನು ಗೌರವಿಸುತ್ತ ಶ್ರೀಮಾತೆ ಒಂದು ದಿನ ಜಗನ್ನಾಥನಿಗೆ ನಿವೇದಿಸುವ ಬೆಳಗ್ಗಿನ 'ಬಾಲ್ಯ ಭೋಗ'ದ ಖಿಚುಡಿ ಮಹಾಪ್ರಸಾದವನ್ನು ಎಲ್ಲರಿಗೂ ತಾವೇ ತಿನ್ನಿಸಿ, 'ನೀವು ನನ್ನ ಬಾಯಿಗೆ ಪ್ರಸಾದ ಕೊಡಿ' ಎಂದು ಹೇಳುತ್ತ ಪ್ರಸಾದವನ್ನು ಅವರುಗಳಿಂದ ಸ್ವೀಕರಿಸಿದ್ದರು. ದೈವಯೋಗದಿಂದ ಆ ಆನಂದೋತ್ಸವದ ಸಮಯಕ್ಕೆ ಸರಿಯಾಗಿ ಕಲ್ಕತೆಯಿಂದ ಮಾಸ್ಟರ್ ಮಹಾಶಯ ಹಾಗೂ ವರದಾ ಮಾವ ಬಂದು ತಲುಪಿದರು. ಅವರೂ ಅದೇ ರೀತಿಯಲ್ಲಿ ಪ್ರಸಾದ ಪಡೆದರು.

ಶ್ರೀಮಾತೆಯವರ ದೃಷ್ಟಿಯಲ್ಲಿ ಶ್ರೀರಾಮಕೃಷ್ಣರ ಪೂಜೆಯ ತಾತ್ಪರ್ಯವೇನೆಂದರೆ, ಕೇವಲ ಠಾಕೂರರ ಶ್ರೀಚರಣಗಳಲ್ಲಿ

ಉಪಚಾರಗಳನ್ನು ಅರ್ಪಿಸುವುದಕ್ಕೆ ಅಥವಾ ಆತ್ಮನಿವೇದನೆಗೆ ಅದು ಸೀಮಿತವಾಗುವುದಿಲ್ಲ. ಜನಮಾನಸದಲ್ಲಿ ಆಧ್ಯಾತ್ಮಿಕ ಆದರ್ಶದ ವಿಸ್ತಾರವಾಗಬೇಕೆಂಬುದೇ ಪಟಕ್ಕೆ ಮಾಡುವ ಶ್ರೀರಾಮಕೃಷ್ಣರ ಪೂಜೆಯ ತಾತ್ಪರ್ಯ. ಶ್ರೀಮಾತೆಯವರ ದೃಷ್ಟಿಯಲ್ಲಿ ಯಾವುದೇ ಆದರ್ಶವಾದರೂ ಅದು ರಾಜನೈತಿಕವಾಗಿರಲಿ ಅಥವಾ ಹತ್ತಾರು ಜನರ ಸಂಸ್ಥೆಯದ್ದಾಗಲಿ, ಆಧ್ಯಾತ್ಮಿಕ ಭಾವ ಹಾಗೂ ಆದರ್ಶಗಳು ಅದನ್ನು ಪುಷ್ಟಿಗೊಳಿಸಬೇಕು. ಆಧ್ಯಾತ್ಮಿಕತೆಯ ಮೂರ್ತವಿಗ್ರಹ ರಾದ ಶ್ರೀರಾಮಕೃಷ್ಣರೇ ಆ ಆಧ್ಯಾತ್ಮಿಕ ಆದರ್ಶದ ಚಾಲನೆ ಹಾಗೂ ಪ್ರಾಣಸಂಚಾರಗಳನ್ನು ಮಾಡಬಲ್ಲವರು. ಆದ್ದರಿಂದ ಪ್ರತಿಯೊಂದು ಆಶ್ರಮದಲ್ಲೂ ಠಾಕೂರರ ಪ್ರತಿಷ್ಠೆಯಾಗಬೇಕು ಹಾಗೂ ಅವರನ್ನು ಕೇಂದ್ರವಾಗಿರಿಸಿಕೊಂಡೇ ಎಲ್ಲ ಕಾರ್ಯಚಟುವಟಿಕೆಗಳೂ ನಡೆಯ ಬೇಕೆಂದು ಶ್ರೀಮಾತೆಯವರು ಬಯಸುತ್ತಿದ್ದರು.

೧೯೧೧ರಲ್ಲಿ ಕೊಯಲ್‌ಪಾರಾ ಆಶ್ರಮದ ಅಧ್ಯಕ್ಷರಾದ ಕೇದಾರ ಬಾಬುವನ್ನು ಉದ್ದೇಶಿಸಿ ಶ್ರೀಮಾತೆ ಹೇಳಿದ್ದರು: ''ಈ ಬಾರಿ ಹೋಗುವಾಗ ಅಲ್ಲಿ ಠಾಕೂರರನ್ನು ಕೂಡಿಸಿ ಹೋಗುವೆ. ಪೂಜೆ, ಆರತಿ, ಅನ್ನ ನೈವೇದ್ಯಗಳನ್ನು ನಿಯಮದಂತೆ ನಡೆಸು. ಕೇವಲ ಸ್ವದೇಶೀ ಆಂದೋಲನದಿಂದ ಏನಾದೀತು? ನಮ್ಮದೇನಿರು ವುದೋ ಅದೆಲ್ಲದರ ಮೂಲವೇ ಠಾಕೂರರು. ಅವರೇ ಆದರ್ಶ. ಏನು ಬೇಕಾದರೂ ಮಾಡು, ಆದರೆ ಅವರನ್ನು ಗಟ್ಟಿಯಾಗಿ ಹಿಡಿದುಕೊಂಡು ಮಾಡಿದರೆ ಹಳಿ ತಪ್ಪುವುದಿಲ್ಲ.'' ಕೇದಾರ್‌ಬಾಬು ಹೇಳಿದರು, ''ದೇಶದ ಕೆಲಸವನ್ನು ಮಾಡಬೇಕೆಂದು ಸ್ವಾಮೀಜಿ ತುಂಬ ಹೇಳಿರುವರಲ್ಲ? ಅವರು ಇಂದು ಬದುಕಿದ್ದಿದ್ದರೆ ದೇಶದಲ್ಲಿ ಎಷ್ಟೆಲ್ಲ ಕೆಲಸಗಳಾಗುತ್ತಿತ್ತು!'' ಈ ಮಾತುಗಳನ್ನು ಕೇಳಿದ ಕೂಡಲೇ ಶ್ರೀಮಾತೆ ಹೇಳಿದರು, ''ಅಬ್ಬ! ನನ್ನ ನರೇನ್ ಇಂದು ಉಳಿದಿದ್ದರೆ ಕಂಪೆನಿ (ಬ್ರಿಟಿಷ್ ಸಾಮ್ರಾಜ್ಯ) ಅವನನ್ನು ಸುಮ್ಮನೆ ಬಿಟ್ಟುಬಿಡು ತ್ತಿತ್ತೆ? ಜೇಲಿನಲ್ಲಿ ಕೂಡಿಹಾಕಿ ಬಿಡುತ್ತಿತ್ತು. ನನಗಂತೂ ಇದನ್ನು ನೋಡಲಾಗುತ್ತಿರಲಿಲ್ಲ. ಒರೆ ಬಿಚ್ಚಿದ ಕತ್ತಿಯಂತೆ ನರೇನ್.''

ಶ್ರೀಮಾತೆಯವರೇ ಸಂಘಜನನಿ, ಹಾಗೂ ಸಂಘವನ್ನು ನಡೆಸು ತ್ತಿರುವುದೂ ಅವರೇ. ಗೃಹಸ್ಥರು ಮಾಡುವ ಪೂಜಾದಿ ಕ್ರಿಯೆಗಳಲ್ಲಿ ಗೃಹಕರ್ತಾ ಅಥವಾ ಗೃಹಿಣಿಯನ್ನು ಯಜಮಾನರಾಗಿ ನೇಮಿಸಿ ಅವರ ಹೆಸರಿನಲ್ಲೇ ಸಂಕಲ್ಪ ಮಾಡುವಂತೆ, ಶ್ರೀರಾಮಕೃಷ್ಣ ಸಂಘ ದಲ್ಲಿ ಆಚರಿಸುವ ಕಾಳೀ, ಜಗದ್ಧಾತ್ರೀ, ಲಕ್ಷ್ಮೀ, ಸರಸ್ವತೀ ಮುಂತಾದ, ತಂತ್ರ-ಪುರಾಣಗಳಲ್ಲಿ ಹೇಳಿರುವ ಪೂಜೆಗಳಲ್ಲಿ ಸಂಘಜನನಿ ಶ್ರೀಮಾತೆಯವರ ಹೆಸರಿನಲ್ಲೇ ಸಂಕಲ್ಪವನ್ನು ಮಾಡ ಲಾಗುತ್ತದೆ. ಈ ಎಲ್ಲ ಪೂಜೆಗಳಿಗೆ ಶ್ರೀಮಾತೆಯವರೇ ಯಜ ಮಾನರು. ಸ್ವಯಂ ಸ್ವಾಮೀಜಿಯೇ ಈ ವ್ಯವಸ್ಥೆಗೆ ಚಾಲನೆ ನೀಡಿ ದ್ದಾರೆ ಹಾಗೂ ಶ್ರೀಮಾತೆಯವರು ಇದಕ್ಕೆ ಸಮ್ಮತಿಸಿದ್ದರು. ಆದ್ದ ರಿಂದ ಮೊದಲ ಬಾರಿಗೆ ಬೇಲೂರು ಮಠದಲ್ಲಿ ದುರ್ಗಾಪೂಜೆ ಯಾದ ನಂತರ ತಂತ್ರಧಾರಕರಾಗಿದ್ದ ಈಶ್ವರಚಂದ್ರ ಚಕ್ರವರ್ತಿಗೆ ಇಪ್ಪತ್ತೈದು ರೂಪಾಯಿಗಳ ದಕ್ಷಿಣೆಯನ್ನು ಶ್ರೀಮಾತೆಯವರ ಕೈಯಿಂದಲೇ ಕೊಡಿಸಿದ್ದರು ಸ್ವಾಮೀಜಿ.

ಈ ಮೇಲಿನ ಚರ್ಚೆಗಳಿಂದ ಶ್ರೀಮಾತೆಯವರು ಮಾಡುತ್ತಿದ್ದ ಅನುಪಮ ಪೂಜೆಯ ವೈಶಿಷ್ಟ್ಯ ಎದ್ದು ಕಾಣುತ್ತದೆ. ಹೇಗೆ ಸೂರ್ಯನ ತೇಜಸ್ಸು, ಬೆಳಕುಗಳನ್ನು ಬೇರೆ ಯಾವುದರೊಂದಿಗೂ ಹೋಲಿಸಲಾಗುವುದಿಲ್ಲವೋ, ಹಾಗೆಯೇ ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ಆರಾಧಿಸುತ್ತಿದ್ದ ರೀತಿ ತನಗೆ ತಾನೇ ಉಜ್ವಲ. ಶ್ರೀರಾಮಕೃಷ್ಣಮಯ ಜೀವಿತೆಯಾದ ಶ್ರೀಶಾರದಾದೇವಿಯವ ರನ್ನು ಶ್ರೀರಾಮಕೃಷ್ಣರೇ ಮೊದಲಾದವರು ಸರಸ್ವತಿ ಎಂಬಿತ್ಯಾದಿ ಯಾಗಿ ಪೂಜಿಸಿದರು; ಅವರನ್ನು ಪೂಜ್ಯ ವಿಗ್ರಹವಾಗಿಸಿ ತನ್ಮೂಲಕ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡಿದ್ದಾರೆ.

ಶಾಸ್ತ್ರಗಳೇ ಮೈವೆತ್ತಂತಿದ್ದ ಶ್ರೀಮಾತೆಯವರು ಶಾಸ್ತ್ರವಾಕ್ಯ ಗಳಲ್ಲಿ ಅಪಾರ ಶ್ರದ್ಧೆ ಹೊಂದಿದ್ದರು. ಜಗತ್ತಿನಲ್ಲಿ ಸುಸ್ಥಿತಿಯನ್ನು ಕಾಪಾಡಲು ಹಾಗೂ ಯಾವುದೇ ರೀತಿಯ ಅಡೆತಡೆಗಳೂ ಇಲ್ಲದೆ ಜನಸಾಮಾನ್ಯರು ತಮ್ಮ ತಮ್ಮ ವರ್ಣಾಶ್ರಮ ಹಾಗೂ ಯೋಗ್ಯತೆ ಗಳಿಗನುಸಾರವಾಗಿ ಕೃತಾರ್ಥರಾಗಲೆಂದು ಭಗವಂತನು ಅವತರಿಸು ತ್ತಾನೆ. ಭಗವತಿಯಾಗಿ ಧರೆಗೆ ಇಳಿದು ಬರುವುದೂ ಅದಕ್ಕಾಗಿಯೇ. ಆದ್ದರಿಂದ ಪ್ರಚಲಿತ ರೀತಿನೀತಿಗಳಿಗಾಗಲೀ, ಧರ್ಮ ವಿಶ್ವಾಸಗಳಿ ಗಾಗಲೀ ಶ್ರೀಮಾತೆಯವರು ಆಘಾತವನ್ನುಂಟುಮಾಡಲಿಲ್ಲ. ಹೇಗೆ ಹಿಂದೂ ದೇವದೇವಿಯರ ಪೂಜೆ, ಸೇವೆ ಹಾಗೂ ಬೇರೆ ಬೇರೆ ಅನುಷ್ಠಾನಗಳನ್ನು ಶ್ರೀಮಾತೆಯವರು ಅನುಮೋದಿಸಿದ್ದರೋ ಅಂತೆಯೇ ತಾವೂ ಸ್ವತಃ ಅಂತಹ ಧರ್ಮ ಕರ್ಮಗಳಲ್ಲಿ ಸಂಪೂರ್ಣ ವಾಗಿ ತೊಡಗಿಸಿಕೊಂಡಿದ್ದರು. ಎಲ್ಲ ದೇವದೇವಿಯರಲ್ಲೂ ಸಮ ನಾಗಿ ಮರ್ಯಾದೆಯನ್ನು ತೋರುತ್ತ ಸಕಲರೊಂದಿಗೆ ತನ್ನ ಅಥವಾ ಶ್ರೀರಾಮಕೃಷ್ಣರ ತಾದಾತ್ಮ್ಯವನ್ನು ಅನುಭವಿಸುತ್ತಿದ್ದರು. ಎಲ್ಲ ಕ್ಕಿಂತಲೂ ಮಿಗಿಲಾಗಿ ಅವರ ವಿಚಾರಗಳಲ್ಲಿ ಪ್ರಮುಖವಾಗಿದ್ದುದು ಎಲ್ಲರನ್ನೂ ಮೀರಿದ ಶ್ರೀರಾಮಕೃಷ್ಣರ ಮಹಿಮೆ. ಹೇಗೆ ಎಲ್ಲ ನೀರಿಗೂ ಸಮುದ್ರವೇ ಆಧಾರವೋ ಹಾಗೆಯೇ ಶ್ರೀರಾಮಕೃಷ್ಣರ ಪೂಜೆಯಲ್ಲಿ ಎಲ್ಲ ದೇವದೇವಿಯರ ಪೂಜೆಯೂ ಪರ್ಯವಸಾನ ಗೊಳ್ಳುತ್ತ ಸಾರ್ಥಕವಾಗುತ್ತಿತ್ತು ಅವರ ದೃಷ್ಟಿಯಲ್ಲಿ. ವಸ್ತುತಃ ಕೇವಲ ಲೀಲೆಗಾಗಿ ಶ್ರೀರಾಮಕೃಷ್ಣರಿಂದ ಬೇರೆಯಾದ ದೇಹವನ್ನು ಸ್ವೀಕರಿಸಿದ್ದ ಶ್ರೀಮಾತೆಯವರಿಂದ ಮಾತ್ರ ಶ್ರೀರಾಮಕೃಷ್ಣರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿತ್ತು. ಶ್ರೀರಾಮ ಕೃಷ್ಣರ ತತ್ತ್ವ, ಮರ್ಮಗಳನ್ನು ಅವರು ಮಾತ್ರ ಬಲ್ಲವರಾಗಿದ್ದರು. ಶ್ರೀರಾಮಕೃಷ್ಣರ ಪೂಜೆಯನ್ನು ಸರಿಯಾಗಿ ಮಾಡಿದರೆ ಸಮಸ್ತ ದೇವದೇವಿಯರ ಪೂಜೆಯೂ ಮಾಡಿದಂತೆ, ಎಲ್ಲರ ಕೃಪೆ, ಆಶೀ ರ್ವಾದಗಳನ್ನು ಪಡೆದಂತೆ ಎಂಬುದೇ ಶ್ರೀಮಾತೆಯವರ ದೃಷ್ಟಿ ಕೋನ. ಯಾವುದನ್ನು ಶ್ರೀಮಾತೆಯವರು ಅನುಭವದಿಂದ ಪಡೆದು ಕೊಂಡಿದ್ದರೋ ಅದನ್ನೇ ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿದ್ದರು.

*(ಮೂಲ: 'ಶ್ರೀ ಮಾಯೇರ್ ಪೂಜಾರ್ ವೈಶಿಷ್ಟ್ಯ ಓ ತಾತ್ಪರ್ಯ' ಸ್ವಾಮಿ ಪ್ರಮೇಯಾನಂದ, 'ಶಾರದಾ-ಅನುಧ್ಯಾನ' ಗ್ರಂಥ, ಪು. 76; ಡಿಸೆಂಬರ್ 2005; ಪ್ರಕಟಣೆ: ರಾಮಕೃಷ್ಣ ಮಿಶನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್, ಗೋಲ್ ಪಾರ್ಕ್, ಕಲ್ಕತ್ತಾ – 700 029)*